MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:88 ENGLISH DAILY Subscription Yearly - Rs. - TUESDAY 16-11-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದ ಖಾದ್ಯ ತೈಲ ಆಮದು ಗಾತ್ರ ಸುಮಾರು ಹಿಂದಿನ ವರ್ಷದಷ್ಟೇ ಮೌಲ್ಯ ದಾಖಲೆ ಹೆಚ್ಚಳ

ಭಾರತದ 2020–21 ನೇ ವರ್ಷದ ಖಾದ್ಯತೈಲ ಆಮದು ಮೌಲ್ಯ ದಾಖಲೆ 63 ಶೇಕಡಾ ಹೆಚ್ಚಳವಾಗಿದ್ದು 1.17 ಟ್ರಿಲಿಯನ್ ($ 15.71) ರೂಪಾಯಿಗಳಾಗಿವೆಯೆಂದು (SEA) ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ ಹೇಳಿದೆ. ಆಮದು ಗಾತ್ರ 3.53 ಮಿಲಿಯನ್ ಟನ್ ಗಳಾಗಿದ್ದು ಹಿಂದಿನ ತೈಲ ವರ್ಷದಲ್ಲಿ 13.52 ಮಿಲಿಯನ್ ಟನ್ ಗಳಾಗಿತ್ತು. ಖಾದ್ಯತೈಲ ದರ ಹೆಚ್ಚಳ ಮೌಲ್ಯ ದಾಖಲೆ ಹೆಚ್ಚಳಕ್ಕೆ ಕಾರಣವಾಗಿದೆ. ಪಾಮೆಣ್ಣೆ ಆಮದು 15.2 ಶೇಕಡಾ ಹೆಚ್ಚಳವಾಗಿ 8.32 ಮಿಲಿಯನ್ ಟನ್ ಗಳಾಗಿವೆ. ಸೋಯಬೀನ್ ಎಣ್ಣೆ ಆಮದು 15 ಶೇಕಡಾ ಇಳಿಕೆಯಾಗಿ 12.87 ಮಿಲಿಯನ್ ಟನ್ ಹಾಗೂ ಸೂರ್ಯಕಾಂತಿ ಎಣ್ಣೆ 25 ಶೇಕಡಾ ಇಳಿಕೆಯಾಗಿ 1.9 ಮಿಲಿಯನ್ ಟನ್ ಗಳಾಗಿದೆ. ಮುಂದಿನ ತೈಲ ವರ್ಷದಲ್ಲಿ ಆಮದು ಸ್ವಲ್ಪ ಮಟ್ಟಿನ ಇಳಿಕೆ ಕಾಣಲಿದೆಯೆನ್ನಲಾಗಿದೆ. ದೇಶೀ ತೈಲಬೀಜ ಉತ್ಪಾದನೆ ಹೆಚ್ಚಳವಿರುವುದರಿಂದ ಆಮದು ಇಳಿಕೆಯಾಗುವ ಸಾಧ್ಯತೆಯಿದೆ.